SEPTEMBER 21, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ** 75 ನೇ ಜನ್ಮದಿನದ ಹಿನ್ನೆಲೆ, ದೇಶಾದ್ಯಂತ ಆಯೋಜಿತ ಸೇವಾ ಪರ್ವದ ಅಂಗವಾಗಿ, ಹುಬ್ಬಳ್ಳಿ, ತೋಳನಕೆರೆ ಆವರಣದಲ್ಲಿ 'ನಮೋ ಯುವ ರನ್' ಮ್ಯಾರಥಾನ್ ಗೆ ಇಂದು ಬೆಳಗ್ಗೆ ಚಾಲನೆ ನೀಡಲಾಯಿತು. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿ ಅವರು, 'ನಶೆ ಮುಕ್ತ ಭಾರತ' ಧ್ಯೇಯದೊಂದಿಗೆ, ದೇಶದ 75 ನಗರಗಳಲ್ಲಿ ನಮೋ ಯುವ ರನ್ ಮ್ಯಾರಾಥನ್ ಆಯೋಜಿಸಲಾಗಿದೆ, ಇದು ದಾಖಲೆಯ ಅಭಿಯಾನವಾಗಿದ್ದು, ಸಾವಿರಾರು ಸಂಖ್ಯೆಯಲ್ಲಿ ಯುವ ಜನರು ಭಾಗಿಯಾಗಿದ್ದಾರೆ ಎಂದರು. ಮಾಜಿ ಕ್ರಿಕೆಟಿಗ ವೆಂಕಟೇಶ ಪ್ರಸಾದ್ ಹಾಗೂ ಕೆ.ಎಲ್.ಇ ಸಂಸ್ಥೆ ಕಾರ್ಯಾಧ್ಯಕ್ಷ ಡಾಕ್ಟರ ಪ್ರಭಾಕರ ಕೋರೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

<><><>

**ಅಂತಾರಾಷ್ಟ್ರೀಯ ಕಡಲತೀರ ಸ್ವಚ್ಛತಾ** ದಿನದ ಅಂಗವಾಗಿ, ಇಂದು ಉತ್ತರ ಕನ್ನಡ ಜಿಲ್ಲೆ ಕಾರವಾರದ ರವೀಂದ್ರನಾಥ ಟ್ಯಾಗೋರ್ ಕಡಲತೀರದಲ್ಲಿ ಭಾರತೀಯ ಕೋಸ್ಟ್ ಗಾರ್ಡ್ ವತಿಯಿಂದ ಸ್ವಚ್ಛತಾ ಕಾರ್ಯಕ್ರಮ ಆಯೋಜಿತವಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾಕ್ಟರ ದಿಲೀಷ್ ಶಶಿ, ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಕೋಸ್ಟ್ ಗಾರ್ಡ್ ಸಿಬ್ಬಂದಿ, ಮೀನುಗಾರರು ಹಾಗೂ ಸಾರ್ವಜನಿಕರು ಕಡಲ ತೀರ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡರು.

<><><>

**ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳು** ಹಾಗೂ ಕಿತ್ತೂರು ಕರ್ನಾಟಕದ 6 ಜಿಲ್ಲೆಗಳು ಸೇರಿ, ಉತ್ತರ ಕರ್ನಾಟಕದ ಒಟ್ಟು 13 ಜಿಲ್ಲೆಗಳಲ್ಲಿ ಈ ತಿಂಗಳ 2ನೇ ಪಾಕ್ಷಿಕದಲ್ಲಿ, ಉಷ್ಣತೆ ಪ್ರಮಾಣ, 20 ಡಿಗ್ರಿ ಸೆಲ್ಸಿಯಸ್ ನಿಂದ 30 ಡಿಗ್ರಿ ಸೆಲ್ಸಿಯಸ್ ವರೆಗೆ, ಹಾಗೂ ಆರ್ದ್ರತೆಯ ಪ್ರಮಾಣ, ಶೇಕಡ 85 ರಿಂದ 95ರ ವರೆಗೆ ಹೆಚ್ಚುವ ಸಾಧ್ಯತೆ ಇದೆ ಎಂದು, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ವಿಸ್ತರಣಾ ನಿರ್ದೇಶಕರು ತಿಳಿಸಿದ್ದಾರೆ. ಬೆಳೆಗಳಿಗೆ ಕೀಟ ಮತ್ತು ರೋಗ ಬಾಧೆಯ ಸಾಧ್ಯತೆ ಇದ್ದು, ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಂದ, ಹೆಚ್ಚಿನ ಮಾಹಿತಿ ಪಡೆಯಲು, ರೈತರಿಗೆ ಸಲಹೆ ನೀಡಲಾಗಿದೆ.

<><><>

**ಸರಕು ಮತ್ತು ಸೇವಾ ತೆರಿಗೆ,** ಕೇಂದ್ರ ಮಂಡಳಿಯ, 56 ನೇ ಶಿಫಾರಸಿನಂತೆ, ನಾಳೆ, ನವರಾತ್ರಿಯ ಮೊದಲ ದಿನದಿಂದ ದೇಶಾದ್ಯಂತ ಜಾರಿಗೊಳ್ಳಲಿದೆ. ಎರಡನೇ ಆವೃತ್ತಿ ಪರಿ ್ಕರಣೆಯಲ್ಲಿ, ಹವಾನಿಯಂತ್ರಕಗಳು, ಟೆಲಿವಿಶನ್, ಮರುಬಳಕೆ ಇಂಧನ

ಮೂಲಗಳ ಪರಿಕರಗಳ ಮೇಲಿನ ತೆರಿಗೆಯನ್ನು, ಕಡಿತಗೊಳಿಸಲಾಗಿದೆ. ಈ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಧಾರವಾಡ ಉಚ್ಚ ನ್ಯಾಯಾಲಯದ, ಯುವ ನ್ಯಾಯವಾದಿ, ಪ್ರಿಯಾಂಕ ತೆರಗುಂಟಿ ಅವರು...

<><><>

**ಧ್ವನಿ: ಪ್ರಿಯಾಂಕ ತೆರಗುಂಟಿ 39 ಸೆಕೆಂದುಗಳು**

<><><>

**ಉಪಗ್ರಹಗಳನ್ನು ದಶಕಗಳ ಕಾಲ ನಿರ್ವಹಿಸಿ,** ಸ್ಪೇಸ್ ರಿಕವರಿ ಕ್ಯಾಪ್ಸೂಲ್‌ನ್ನು, ಸಸೂತ್ರವಾಗಿ ಇಳಿಸಿದ ತಂಡದಲ್ಲಿ ಅವಕಾಶ ದೊರೆತಿದ್ದು, ತಮಗೆ ಪ್ರೇರಣೆ ನೀಡಿದೆ ಎಂದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋದ, ಉಪ ಪ್ರಧಾನ ವ್ಯವಸ್ಥಾಪಕಿ, ಬಾಹ್ಯಾಕಾಶ ವಿಜ್ಞಾನಿ, ರೂಪಾ ಮಳಲಿ ಹೇಳಿದ್ದಾರೆ. ಕರಾವಳಿ ಲೇಖಕಿಯರ ಹಾಗೂ ವಾಚಕಿಯರ ಸಂಘ, ಮೈಸೂರಿನ ಸಮತಾ ಅಧ್ಯಯನ ಕೇಂದ್ರ, ಮಂಗಳೂರಿನಲ್ಲಿ ಆಯೋಜಿಸಿದ್ದ, 'ಸಾಧಕಿಯರೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು.

<><><>

**ಕಲ್ಯಾಣ ಕರ್ನಾಟಕದ,** ರಾಯಚೂರು ಜಿಲ್ಲೆಯ ಯರ ಮರಸ್‌ನಲ್ಲಿ, ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣಕ್ಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು ಭೇಟಿ ನೀಡಿ, ಪರಿಶೀಲಿಸಿದರು. ರಾಜ್ಯ ಹಾಗೂ ದೇಶದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಲು, 2026ರ ದಸರಾ ವೇಳೆಗೆ ರಾಯಚೂರು ವಿಮಾನ ನಿಲ್ದಾಣ ಸಕ್ಷಮವಾಗಲಿದೆ ಎಂದರು.

<><><>

**ಗದಗ ಬೆಟಗೇರಿ ನಗರದ,** ಜವಳ ಗಲ್ಲಿಯಲ್ಲಿ, 'ಪ್ರಭುವಿನೆಡೆಗೆ ಪ್ರಭುತ್ವ' ಕಾರ್ಯಕ್ರಮದ, ನಿಯಂತ್ರಣ ಕೇಂದ್ರವನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟಿಸಿದರು. ಬಳಿಕ ಮಾತನಾಡಿದ ಮುಖ್ಯಮಂತ್ರಿ, ಗದಗ ಬೆಟಗೇರಿ ಅವಳಿನಗರದ ಸಾರ್ವಜನಿಕರು ಎದುರಿಸುತ್ತಿರುವ, ಸಮಸ್ಯೆಗಳನ್ನು ಕಾಲಮಿತಿಯಲ್ಲಿ ಸ್ಥಳದಲ್ಲೇ ಪರಿಹರಿಸಲು, ಪ್ರಭುವಿನೆಡೆಗೆ ಪ್ರಭುತ್ವ ಕೇಂದ್ರ, ಪ್ರಮುಖ ಪಾತ್ರ ವಹಿಸಲಿದೆ ಎಂದರು.

<><><>

**ಮುಂಗಾರು ಋತುವಿನ ಹೆಸರು,** ಉದ್ದು, ಸೂರ್ಯಕಾಂತಿ, ಕಡಲೆಕಾಳು ಹಾಗೂ ಸೋಯಾಬೀನ್ ಬೆಳೆಗಳನ್ನು, ಬೆಂಬಲ ಬೆಲೆ ಯೋಜನೆಯಡಿ, ಖರೀದಿಸಲು ಕೇಂದ್ರದ ಕೃಷಿ ಸಚಿವಾಲಯ ಒಪ್ಪಿಗೆ ಸೂಚಿಸಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ರಾಜ್ಯ ಸರ್ಕಾರದ ಪ್ರಸ್ತಾವವನ್ನು ತಾವು ಅನುಮೋದಿಸಿ, ಕೇಂದ್ರ ಕೃಷಿ ಸಚಿವರಿಗೆ ಮನವಿ ಸಲ್ಲಿಸಿದ್ದಾಗಿ, ಈಗಾಗಲೇ ಖರೀದಿ ಕೇಂದ್ರಗಳಲ್ಲಿ, ಆವಕ ಆರಂಭವಾಗಿದೆ ಎಂದು, ಸಚಿವ ಜೋಶಿ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>